# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 208/2018

| | | | |
|---|---|---|---|
| ಸಿಡಬ್ಲ್ಯೂ | 7 | ಪಿಡಬ್ಲ್ಯೂ | 4 |

ಸಾಕ್ಷಿದಾರರ ಹೆಸರು : ಶ್ರೀ ಬಸವನಗೌಡ

ತಂದೆ ಹೆಸರು : ಮೇಘರಾಜ

ವಯಸ್ಸು : 20 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 03.06.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬಳಗನೂರು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ಆರೋಪಿತರು ನನ್ನ ಸಂಬಂಧಿಕರು. ಜೂನ್ 2018 ರಲ್ಲಿ ಬೆಳಿಗ್ಗೆ 8.30 ಗಂಟೆಗೆ ನಾನು ಮನೆಯಲ್ಲಿ ಟಿ ಕುಡಿಯುತ್ತಿದ್ದಾಗ, ಏಕಾಏಕಿ ಚಂದ್ರಪ್ಪ, ಶ್ರೀಮಾತೆವ್ವ, ಕೊಟ್ರಪ್ಪ, ನಾರಪ್ಪ ಬಂದು ನಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿ, ಶ್ರೀಮಾತೆಮ್ಮ ಸಿದ್ದಮ್ಮನ ಕೂದಲು ಹಿಡಿದು ಎಳೆದು ಹೊಡೆದಿರುತ್ತಾರೆ. ನನ್ನ ತಂದೆ ಮೇಘರಾಜ ಮತ್ತು ನನ್ನ ಚಿಕ್ಕಪ್ಪ ಕುಬೇರಗೌಡರಿಗೆ ಕಣಗದಿಂದ ಹೊಡೆದು ಬೀಳಿಸಿರುತ್ತಾರೆ. ಚಂದ್ರಪ್ಪ ಮೇಘರಾಜರಿಗೆ ಕಣಗದಿಂದ ಹೊಡೆದಿರುತ್ತಾರೆ. ಚಂದ್ರಪ್ಪ ಕುಡುಗೋಲು ತೆಗೆದುಕೊಂಡು ಕುಬೇರಗೌಡರಿಗೆ ಹೊಡೆಯಲು ಹೋದರು. ನಾರಪ್ಪ ನನಗೆ ಜಾಡಿಸಿ ಒದ್ದರು. ನಾನು ಮುಖ್ಯರಸ್ತೆಗೆ ಬಂದು ಯಾರಾದರು ಬನ್ನಿ ಅಂತಾ ಕಿರುಚಾಡಿದೆ ಆಗ ಮಲ್ಲಿಕಾರ್ಜುನ, ಕುಬೇರಪ್ಪ, ಸಂತೋಷ ಬಂದು ಜಗಳ ಬಿಡಿಸಿದರು. ಹೆಚ್ಚಿನ ಚಿಕಿತ್ಸೆಗೆ ಹರಪನಹಳ್ಳಿ ಆಸ್ಪತ್ರೆಗೆ ಹೋದೆವು. ನ್ಯಾಯಾಲಯದ ಮುಂದಿರುವ ಮು.ಮಾ.1 ಕಣಗದಿಂದಲೇ ಹಲ್ಲೆ ಮಾಡಿರುತ್ತಾರೆ. ಆರೋಪಿತರನ್ನು ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಜಿ.ಬಿ. ವಕೀಲರಿಂದಃ-**

ಕುಬೇರಗೌಡ ನನ್ನ ಚಿಕ್ಕಪ್ಪ, ಚಾ.ಸಾ5 ನನ್ನ ತಂದೆ. ನಮ್ಮ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿ. ಜಮೀನಿನ ವಿಚಾರ ದಲ್ಲಿ ನಮಗೂ ಆರೋಪಿತರಿಗೂ ವೈಮನಸ್ಸಿದಎಎಮ ದರೆ ಸರಿ. ದಿನಾಂಕ:17.06.2018 ರಂದು ಬೆಳಿಗ್ಗೆ 8.00 ಗಂಟೆಗೆ

ನಾವೆಲ್ಲರೂ ಸೇರಿ ಆರೋಪಿತರೊಂದಿಗೆ ಜಗಳ ಮಾಡಿದ್ದೆವು ಎಂದರೆ ಸರಿ. ಬೇವಿನಮರದ ಕಟ್ಟೆ ಹತ್ತಿರ ಕೂಡಾ ಜಗಳ ಆಯಿತು. ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಳಿಗ್ಗೆ 8.30 ಕ್ಕೆ ಆರೋಪಿತರು ಆಸ್ಪತ್ರೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಆಸ್ತಿ ವಿಚಾರದಲ್ಲಿ ವೈಮನಸ್ಸಿದ್ದ ಕಾರಣ ನಾವೇ ಆರೋಪಿತರಿಗೆ ಹೊಡೆದು ಬಡೆದು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ದೂರು ಕೊಟ್ಟಿರುವ ಕಾರಣ ರಾಜಿ ಮಾಡಿಸಿಕೊಳ್ಳುವ ಉದ್ದೇಶದಿಂದ ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಕಣಗದಿಂದ ಆರೋಪಿತರು ಹೊಡೆದರು ಎಂದು ಸುಳ್ಳೂ ಸಾಕ್ಷಿ ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಯಹತ್ತಿರ ಬಂದಿಲ್ಲ, ಜಗಳ ಮಾಡಿಲ್ಲ, ಕುಬೇರಗೌಡನಿಗೆ ಕಣಗದಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾರನ್ನೂ ಕೂಗಿಲ್ಲ, ಮಲ್ಲಪ್ಪ ಮತ್ತು ಕುಬೇರಗೌಡ ಜಗಳ ಬಿಡಿಸಿಲ್ಲ ಆದರೂ ಸುಳ್ಳೂ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೂ ಕೂಡ ಚಿಕಿತ್ಸೆ ಪಡೆದೆ. ನನಗೆ ಮೈ-ಕೈ ಒಳ ನೋವಾಗಿತ್ತು. ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ. ಜಾಡಿಸಿ ಒದ್ದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 208/2018

| ಸಿಡಬ್ಲ್ಯೂ | 6 | ಪಿಡಬ್ಲ್ಯೂ | 3 |
|---|---|---|---|

ಸಾಕ್ಷಿದಾರರ ಹೆಸರು : ಶ್ರೀಮತಿ ಅಂಬಿಕ

ಗಂಡನ ಹೆಸರು : ಮೇಘರಾಜ

ವಯಸ್ಸು : 60 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 03.06.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬಳಗನೂರು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ಆರೋಪಿತರು ನನ್ನ ಸಂಬಂಧಿಕರು. ಜೂನ್ 2018 ರಲ್ಲಿ ಬೆಳಿಗ್ಗೆ 8.00 ಗಂಟೆಗೆ ನಾನು ಮನೆಯಲ್ಲಿ ಟಿ ಕುಡಿಯುತ್ತಿದ್ದಾಗ, ಕೊಟ್ರಪ್ಪ, ಶ್ರೀಮಾತೆವ್ವ, ಬಸವರಾಜ ಬಂದು ನಮಗೆ ಹೊಡೆದರು, ಓಲೆ ಉದುರಿ ಹೋಗುವ ಹಾಗೆ ಹೊಡೆದಿರುತ್ತಾರೆ. ನಾನು ಆಸ್ಪತ್ರೆಗೆ ಹೋದೆ. ನನಗೆ, ಮೇಘರಾಜ, ಕುಬೇರಗೌಡ ಇವರಿಗೆ ಹೊಡೆದಿರುತ್ತಾರೆ, ನನ್ನ ಅತ್ತೆ ಸಿದ್ದಮ್ಮನನ್ನು ಸೀರೆ ಹಿಡಿದುಕೊಂಡು ಹೊಡೆದಿರುತ್ತಾರೆ. ಕಣಗದಿಂದ ಹೊಡೆದಿರುತ್ತಾರೆ. ಚಾ.ಸಾ.9 ಮತ್ತು 10 ಜಗಳ ಬಿಡಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ.1 ಕಣಗದಿಂದಲೇ ಹಲ್ಲೆ ಮಾಡಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಜಿ.ಬಿ. ವಕೀಲರಿಂದಃ-**

ಚಂದ್ರಪ್ಪ ನಮ್ಮ ವಿರುದ್ದದೂ ರುಣಕೊಟ್ಟಿದ್ದರು ಎಂದರೆಸರಿಯಲ್ಲ . ಜಮೀನಿನವಿಚಾರದಲ್ಲಿನಮಗೂಆರೋಫಿತರಿಗೂ ವೈಮನಸ್ಸಿದಎಎಮ ದರೆ ಸರಿ. ನನಗೆ ಬಸವರಾಜ ಹೊಡೆದಿರುತ್ತಾರೆ. ರುದ್ರಪ್ಪ ಕೂಡ ಹೊಡೆದಿರುತ್ತಾರೆ. ನಾನು ಪೊಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಹೇಳಿಕೆಯಲ್ಲಿ ಎಲ್ಲರೂ ಹೊಡೆದ ಬಗ್ಗೆ ಹೇಳಿದ್ದೇನೆ. ನನ್ನ ಹೇಳಿಕೆಯಲ್ಲಿ ನಾನು ಈರೀತಿ ಹೇಳಿಲ್ಲ ಎಂದರೆ ಸಾಕ್ಷಿಯು ಉತ್ತರ ಕೊಡುವುದಿಲ್ಲ. ಮುರಿದ ಕಿವಿಯ ಓಲೆಯನ್ನು ಪೊಲೀಸರಿಗೆ ಕೊಟ್ಟಿಲ್ಲ. ಕಿವಿಗೆ ಗಾಯ ಅಂತಾ ಹೊಸದಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹರಪನಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಾನು ಮತ್ತು ನನ್ನ ಅತ್ತೆ ಎಲ್ಲರೂ ಚಿಕಿತ್ಸೆ ಪಡೆದಿರುತ್ತೇವೆ. ಆಗ 11.00 ಗಂಟೆ ಆಗಿತ್ತು. ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಆಸ್ತಿ ವಿಚಾರದಲ್ಲಿ ವೈಮನಸ್ಸಿದ್ದ ಕಾರಣ ನಾವೇ ಆರೋಪಿತರಿಗೆ ಹೊಡೆದು ಬಡೆದು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ದೂರು ಕೊಟ್ಟಿರುವ ಕಾರಣ ರಾಜಿ ಮಾಡಿಸಿಕೊಳ್ಳುವ ಉದ್ದೇಶದಿಂದ ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಕಣಗದಿಂದ ಆರೋಪಿತರು ಹೊಡೆದು, ಸೀರೆ ಹಿಡಿದು ಎಳೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ಮಲ್ಲಪ್ಪ ಮತ್ತು ಕುಬೇರಗೌಡ ಜಗಳ ಬಿಡಿಸಿಲ್ಲ ಆದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.